ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :— ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 1999ನೇ ಸಾಲಿನ ಕರ್ನಾಟಕ ಬಾಡಿಗೆ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ,

"ಕರ್ನಾಟಕ ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 1999ನೇ ಸಾಲಿನ ಕರ್ನಾಟಕ ಬಾಡಿಗೆ ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಕರ್ನಾಟಕ ವಿಶ್ವವಿದ್ಯಾನಿಲಯಗಳ ವಿಧೇಯಕ 2000.

7. ಜಂಟಿ ಪರಿಶೀಲನಾ ಸಮಿತಿಗೆ ಸದಸ್ಯರ ನೇಮಕದ ಪ್ರಸ್ತಾವ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರ ಸಚಿವರು) :— ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಪ್ರಸ್ತಾವವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

2000ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕವನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸಲು ವಿಧಾನಸಭೆಯ ಹದಿನೈದು ಹಾಗೂ ವಿಧಾನ ಪರಿಷತ್ತಿನ ಐದು ಸದಸ್ಯರನ್ನೊಳಗೊಂಡ ಒಟ್ಟು 20 ಸದಸ್ಯರನ್ನು ಜಂಟಿ ಪರಿಶೀಲನಾ ಸಮಿತಿಗೆ ನೇಮಿಸಲು ತಮ್ಮ ಅನುಮತಿ ಕೋರುತ್ತೇನೆ.

ಸಮಿತಿಯ ವಿಧಾನಸಭಾ ಸದಸ್ಯರು

ವಿಜಯಕುಮಾರ್ ಶೆಟ್ಟಿ, ಬಿ.ಬಿ. ಶಿವಪ್ಪ, ಡೊಂಗರಗಾಂವ್ ಶಹಜಹಾನ್ ಇಸ್ಮಾಯಿಲ್, ಡಿ.ಸಿ. ತಮ್ಮಣ್ಣ, ಹೆಚ್.ಎಂ. ರೇವಣ್ಣ, ವೈ.ಕೆ. ರಾಮಯ್ಯ, ಟಿ. ಭಾಗೀರಥಿ ಮರುಳಸಿದ್ದಪ್ಪಗೌಡ, ಎಸ್.ಪಿ. ಮುದ್ದಹನುಮೇಗೌಡ, ವಿ. ಸೋಮಣ್ಣ, ಎಸ್.ಎಸ್. ಬೋಳಶೆಟ್ಟಿ, ಶಿವಾನಂದ. ಎಸ್. ಪಾಟೀಲ್, ಎಸ್. ಸುರೇಶ್ ಕುಮಾರ್, ಬಿ. ಸೋಮಶೇಖರ್, ಕೆ.ಬಿ. ಮಲ್ಲಿಕಾರ್ಜುನ ಮತ್ತು ಎ. ರಾಮದಾಸ್

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, ``2000ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕವನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸಲು ರಚಿಸಲಾಗಿರುವ

ಜಂಟಿ ಪರಿಶೀಲನಾ ಸಮಿತಿಗೆ ವಿಧಾನಸಭೆಯ 15 ಹಾಗೂ ವಿಧಾನ ಪರಿಷತ್ತಿನ 5 ಸದಸ್ಯರನ್ನು ನೇಮಕ ಮಾಡಿರುವ ಪ್ರಸ್ತಾವಕ್ಕೆ ಸಭೆ ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

8. ಶಾಸನ ರಚನೆ

ಪರ್ಯಾಲೋಚನಾ ಪ್ರಸ್ತಾವ (ಮುಂದುವರಿದ ಚರ್ಚೆ)

ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ ವಿಧೇಯಕ, 2000

+ ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :— ಮಾನ್ಯ ಅಧ್ಯಕ್ಷರೆ, 2000ನೇ ಸಾಲಿನ ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಈಗಾಗಲೇ ಸಭೆಯ ಮುಂದಿಟ್ಟಿದ್ದೇನೆ. ಇದರ ಉದ್ದೇಶವನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ, ನಮ್ಮ ಸಮಾಜದಲ್ಲಿ ಆತಂಕವುಂಟು ಮಾಡುವ ರೀತಿಯಲ್ಲಿ, ಗಂಭೀರ ಹಾಗೂ ತೀವ್ರ ಸ್ವರೂಪದಲ್ಲಿ ಜರುಗುವ ವ್ಯವಸ್ಥಿತ ರೀತಿಯ ಅಪರಾಧ ಕೃತ್ಯಗಳನ್ನು ನಿಯಂತ್ರಿಸುವುದು ಈ ಕಾಯಿದೆಯ ಉದ್ದೇಶವಾಗಿದೆ. ಇಂತಹ ಒಂದು ಅಪರಾಧ ಕೃತ್ಯ ಯಾವುದೇ ಒಂದು ಜಿಲ್ಲೆಗೆ, ರಾಜ್ಯಕ್ಕೆ, ರಾಷ್ಟ್ರಕ್ಕೆ ಸೀಮಿತವಾಗಿರದೆ, ಅಪರಾಧಮೆಸಗುವ ಅಪರಾಧಿಗಳು ಎಲ್ಲಾ ಕಡೆಗಳಲ್ಲೂ ಸರ್ವವ್ಯಾಪಿಯಾಗಿರುತ್ತಾರೆ. ಇಂತಹ ಅಪರಾಧಿಗಳ ಮೇಲೆ ನಾವು ಹತೋಟಿ ಸಾಧಿಸಬೇಕಾದರೆ ಅಥವಾ ಸಮಾಜದಲ್ಲಿ ಜರುಗುವ ಸುಲಿಗೆ, ದರೋಡೆ, ಕೊಲೆ, ಕಳ್ಳಸಾಗಾಣಿಕೆ, ರಾಷ್ಟ್ರವಿರೋಧಿ ಕೃತ್ಯ ಮುಂತಾದ ಅಪರಾಧ ಕೃತ್ಯಗಳನ್ನೆಲ್ಲಾ ನಿಲ್ಲಿಸುವುದಕ್ಕೆ ಇಂತಹ ಕಾನೂನು ಅತ್ಯಂತ ಅವಶ್ಯಕವಾಗಿದೆ. ಈ ಕಾನೂನಿನಡಿ ವಿಶೇಷ ಕೋರ್ಟುಗಳನ್ನು ಸ್ಥಾಪಿಸಿ, ಸ್ಪೆಷಲ್ ಪ್ರಾಸಿಕ್ಯೂಟರ್‌ಗಳನ್ನು ನೇಮಿಸುವುದು, ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವುದು, ಸಾಕ್ಷಿಗಳನ್ನು ಯಾರಾದರೂ ಹೆದರಿಸುವ ಪ್ರಯತ್ನ ಮಾಡಿದರೆ ಅವರಿಗೆ ರಕ್ಷಣೆ ಒದಗಿಸಿಕೊಡುವುದು, ಅದೇ ರೀತಿ ಟೆಲಿಫೋನ್, ಸೆಲ್ಯುಲಾರ್ ಫೋನ್ ಮೂಲಕ ಅಪರಾಧ ಕೃತ್ಯಗಳನ್ನು ಎಸಗುತ್ತಿದ್ದರೆ ಸರ್ಕಾರದ ಅನುಮತಿ ಪಡೆದುಕೊಂಡು ಇಂಟರಸ್ಟ್ ಮಾಡುವುದು, ಅನಂತರ ಯಾವ ಅಪರಾಧಿಗೆ ಯಾವ ರೀತಿಯಾದ ಶಿಕ್ಷೆ ವಿಧಿಸಬೇಕು ಮುಂತಾದ ಅಂಶಗಳನ್ನೆಲ್ಲಾ ಈ ವಿಧೇಯಕದಲ್ಲಿ ನಮೂದಿಸಿದ್ದೇವೆ. ಅದಕ್ಕೋಸ್ಕರ, ಈ ಕಾನೂನನ್ನು ಜಾರಿಗೆ ತಂದರೆ ಸಮಾಜದಲ್ಲಿ ನಡೆಯುತ್ತಿರುವ ಗ್ಯಾಂಗ್ ವಾರ್ಸ್, ಸುಪಾರಿ ಕೊಲೆಗಳು, ರಾಷ್ಟ್ರ ವಿರೋಧಿ ಕೃತ್ಯಗಳು ಮುಂತಾದ ಅಪರಾಧ ಕೃತ್ಯಗಳೆಲ್ಲವನ್ನೂ ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ. ಈಗಾಗಲೇ ಈ ಕುರಿತಾದ ಕಾನೂನು ಪಕ್ಕದ ರಾಜ್ಯವಾದ ಮಹಾರಾಷ್ಟ್ರದಲ್ಲಿ ಅಸ್ತಿತ್ವದಲ್ಲಿದ್ದು, ಅಲ್ಲಿ ಅವರು ಪರಿಣಾಮಕಾರಿಯಾಗಿ ಜಾರಿಗೆ ತರುತ್ತಿದ್ದಾರೆ. ಈ ಕಾನೂನಿನಿಂದ ಆ ರಾಜ್ಯದಲ್ಲಿ ಬಹಳಷ್ಟು ಅನುಕೂಲವಾಗಿದೆ. ಅಲ್ಲಿ ಸಮಾಜ ಘಾತುಕ ಶಕ್ತಿಗಳನ್ನು ವಿಶೇಷವಾಗಿ ದೇಶದ್ರೋಹಿ ಕೆಲಸಗಳಲ್ಲಿ ತೊಡಗಿರುವವರನ್ನು ಬಂಧಿಸಿ ಈ ಕಾನೂನಿನ ಮೂಲಕ ಶಿಕ್ಷೆ